ಸಲುವಾಗಿ ಸರ್ಕಾರದಿಂದ ಸೂಕ್ತ ಆದೇಶಗಳನ್ನು ಕಾಲಕಾಲಕ್ಕೆ ಅನುಗುಣವಾಗಿ ಹೊರಡಿಸಲಾಗಿತ್ತು. ಅವುಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ ಆರ್‌ಡಿ ೧೨೫ ಎಲ್‌ಜಿಪಿ ೭೭, ದಿನಾಂಕ ೧-೯-೧೯೭೭ರ ಪ್ರಕಾರ ಜಮೀನನ್ನು ೧-೯-೭೭ರ ಮೂರು ವರ್ಷಕ್ಕೆ ಮುಂಚಿತವಾಗಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು ಅರ್ಹ ಜನರಿಗೆಲ್ಲರಿಗೂ ಅರ್ಜಿ ಹಾಕಿಕೊಳ್ಳಲು ೧೫-೧೧-೭೮ರವರೆಗೂ ಕಾಲ ನಿಗದಿ ಪಡಿಸಲಾಗಿತ್ತು. ಮತ್ತು ಅರ್ಹರಾದ ಬಹುತೇಕ ಎಲ್ಲರಿಗೂ ಮೇಲ್ಕಂಡ ಆದೇಶದ ಪ್ರಕಾರ ಸಕ್ರಿಯಗೊಳಿಸಲಾಗಿದೆ.

ಇದೇ ಪ್ರಕಾರ ಹರಿಜನ ಗಿರಿಜರಿಗೆ ಮಾತ್ರ ಅನುಕೂಲವಾಗುವಂತೆ ಸರ್ಕಾರದಿಂದ ೨೭-೩-೮೧ರಂದು ಇನ್ನೊಂದು ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು. ಆ ಆದೇಶದ ಪ್ರಕಾರ ಅರ್ಹರಾದ ಹರಿಜನ ಗಿರಿಜನರುಗಳು ೧-೯೭೯ ಕ್ಕಿಂತ ಒಂದು ವರ್ಷದ ಮುಂಚಿತವಾಗಿ ಸರ್ಕಾರದ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಲ್ಲಿ, ಅವರಿಗೆ ಅರ್ಜಿ ಹಾಕಿಕೊಳ್ಳಲು ೧೫-೮-೮೨ರವರೆವಿಗೂ ಕಾಲಾವಕಾಶ ನೀಡಲಾಗಿತ್ತು. ಈ ಆದೇಶದ ಪ್ರಕಾರ ಅರ್ಹರಾದ ಬಹುತೇಕ ಎಲ್ಲಾ ಹರಿಜನ ಗಿರಿಜನರಿಗೆ ಸರ್ಕಾರದ ಬಗರ್ ಹುಕುಂ ಭೂಮಿಯನ್ನು ಸಕ್ರಿಯಗೊಳಿಸಲಾಯಿತು.

ಕೃಷಿ ಕಾರ್ಮಿಕರು, ಭೂ ಹೀನರು ಸಣ್ಣ ಹಾಗೂ ಅತಿ ಸಣ್ಣ ರೈತರುಗಳು ಸರ್ಕಾರದ ಜಮೀನಿನಲ್ಲಿ ತಮ್ಮ ವಾಸಕ್ಕೋಸ್ಕರ ಗುಡಿಸಲುಗಳನ್ನು (ಮನೆಗಳನ್ನು) ಕಟ್ಟಿಕೊಂಡು ವಾಸವಾಗಿರುವಂತಹ ಸಂದರ್ಭಗಳಲ್ಲಿ ಅಂತಹ ಗುಡಿಸಲುಗಳನ್ನು ಅವರವರಿಗೆ ಸಕ್ರಿಯಗೊಳಿಸುವ ಸಲುವಾಗಿ ಸರ್ಕಾರ ಒಂದು ಆದೇಶವನ್ನು ದಿನಾಂಕ ೬-೮-೮೫ರಲ್ಲಿ ಹೊರಡಿಸಿ ಎಲ್ಲಾ ಅರ್ಹಜನರಿಗೂ ಸಕ್ರಿಯಗೊಳಿಸಲಾಗಿದೆ.

ಕರ್ನಾಟಕಾದ್ಯಂತ ಸರ್ಕಾರಿ ಜಮೀನುಗಳನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು, ಇದುವರೆವಿಗೂ ಮೇಲಿನ ಸರ್ಕಾರಿ ಆದೇಶಗಳ ಪ್ರಕಾರ ಸಕ್ರಿಯಗೊಳಿಸದೇ ಇದ್ದಲ್ಲಿ, ಅಂತಹವರಿಗೆ ಈ ಅನಧಿಕೃತ ಸಾಗುವಳಿಯನ್ನು ಅರ್ಹತೆ ಆಧಾರದ ಮೇಲೆ ಸಕ್ರಮಗೊಳಿಸುವ ಬಗ್ಗೆ ಸರ್ಕಾರವು ಕರ್ನಾಟಕ ಭೂ ಕಂದಾಯ ಅಧಿನಿಯಮ (೯ಳನೇ ಕಲಮಿಗೆ) ೧೯೬೪ಕ್ಕೆ ಸೂಕ್ತ ತಿದ್ದುಪಡಿಯನ್ನು ಈಗಾಗಲೇ ಸದನದಲ್ಲಿ ಮಂಡಿಸಲಾಗಿದೆ. ಈ ತಿದ್ದುಪಡಿಯಿಂದ ಅರ್ಹ ಜನರಿಗೆ (ಹರಿಜನ, ಗಿರಿಜನ, ಹಾಗೂ ಇನಿತರರಿಗೆ) ಅನುಕೂಲ ಕಲ್ಪಿಸಿಕೊಡಲಾಗುವುದು.

ಮಾನ್ಯ ಶಾಸಕರು ಆಪಾದಿಸಿರುವಂತೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ವರ್ಷದ ತನಕ ವಿಧಿಸುತ್ತಿದ್ದ ದಂಡ ತೀರ್ವೆಯನ್ನು ೧೦ ರಿಂದ ೧೫ ಪಟ್ಟು ದಂಡ ವಿಧಿಸಲಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲಾ. ಈಗ ಮಂಡಿಸಲಾದ ತಿದ್ದುಪಡಿ ಜಾರಿಗೆ ಬಂದ ಕೂಡಲೆ ಇಂಥ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕಾನೂನಿನನ್ವಯ ಕೈಕೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಅದರ ಜೊತೆಗೆ ದಂಡವನ್ನು ಹಾಕಿದ್ದೀರಿ.

ಅಧ್ಯಕ್ಷರು —ನೀವು ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ಕಾನೂನು ಮಾಡಿದ್ದೇವೆ. ಅದರ ಬಗ್ಗೆ ತಿದ್ದುಪಡಿಯನ್ನು ತರುತ್ತಿದ್ದೇವೆ. ಆಗ ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಬಹುದು

(೭) ಅಶೋಕಪುರಂನಲ್ಲಿ ಹರಿಜನರಿಗೆ ನೀರಿನ ಪೂರೈಕೆ

ಶ್ರೀ ವೇದಾಂತ ಹೆಮ್ಮಿಗೆ —ಮಾನ್ಯ ಅಧ್ಯಕ್ಷರೆ, ಮೈಸೂರು ನಗರ ಪಾಲಿಕೆಯು ಅಶೋಕಪುರಂನಲ್ಲಿರುವ ಹರಿಜನ ನಿವಾಸಿಗಳಿಗೆ ಭಾಗ್ಯ ಜನ ಯೋಜನೆಯನ್ನು ಜಾರಿಗೆ ತರುವ ಸಲುವಾಗಿ ಐದೂವರೆ ಲಕ್ಷ ರೂ. ಗಳನ್ನು ಮೈಸೂರು ಜನ ಮಂಡಳಿಗೆ ಅಂದರೆ ವಾಣಿವಿಲಾಸ ಜಲ ಮಂಡಳಿಗೆ ಇತ್ತು ಸುಮಾರು ೬ ತಿಂಗಳಾದರೂ ಇದುವರೆವಿಗೆ ಭಾಗ್ಯ ಜನ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಬಡ ಹರಿಜನರಿಗೆ ನೀರಿನ ಸೌಕರ್ಯ ದೊರಕದೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳುವ ಸಲುವಾಗಿ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ವಿವರ ನನ್ನಲ್ಲಿಲ್ಲ. ವಿವರಗಳನ್ನು ತರಿಸಿ ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಸದಸ್ಯರು ಗೈರುಹಾಜರಿ.